**ಸಿ.ಸಿ.ನಂಬ್ರ: 481/2023 ಪಿ.ಡಬ್ಲ್ಯೂ :1**

ದಿನಾಂಕ: 26-09-2024 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣೀಕರಿಸಲಾಯಿತು

**ವಾಟಿ ಸವಾಲು: ಶ್ರೀ ಸಿ.ಆರ್.ಪಿ. ವಕೀಲರಿಂದ**

ನಾನು 10ನೇ ತರಗತಿಯವರಗೆ ವ್ಯಾಸಾಂಗ ಮಾಡಿರುತ್ತೇನೆ. ನಾನು ಅರೆಬೈಲಿನಲ್ಲಿ ವಾಸವಿದ್ದೇನೆ.

2. ನನ್ನ ತಾಯಿ ನಾಗಮ್ಮ, ನನ್ನ ತಾಯಿಯ ತಾಯಿ ಚಂದು, ಚಂದುವಿನ ತಾಯಿ ಸುಬ್ಬಿ . ಸುಬ್ಬಿಯ ತಾಯಿ ಗೋವಿಂದು ಹೆಂಗಸ್ಸು. ಗೋವಿಂದು ಹೆಂಗಸ್ಸಿ ಗೆ ಸುಬ್ಬಿ ಮತ್ತು ದುಗ್ಗ ಎಂಬ ಇಬ್ಬರೂ ಮಕ್ಕಳು. ದುಗ್ಗನಿಗೆ 5-6 ಜನ ಮಕ್ಕಳು ಇದ್ದಾರೆ. ಅವರ ಮಕ್ಕಳು ಹೆಸರು ಅಣ್ಣಪ್ಪ , ಸುಬ್ಬ , ಕೃಷ್ಣ. ಅಣ್ಣಪ್ಪ ಮತ್ತು ಸುಬ್ಬ ರವರಿಗೆ ಮಕ್ಕಳು ಇರಬಹುದು. ಸುಬ್ಬಿಯ ಮಕ್ಕಳು ಗಣಪ ಸುಕ್ರು ಹೆಂಗಸ್ಸು, ಚಂದು ಹೆಂಗಸ್ಸು ಮತ್ತು ಪುಟ್ಟಯ್ಯ. ಗಣಪ ಮತ್ತು ಸುಕ್ರವಿಗೆ ಮಕ್ಕಳು ಇಲ್ಲದೆ ಮೃತರಾಗಿರುತ್ತಾರೆ. ಚಂದುವಿಗೆ ನಾಗಮ್ಮ ಮತ್ತು ಅಣ್ಣಪ್ಪ ಇಬ್ಬರು ಮಕ್ಕಳು.

3. ಈ ದಾವೆಯಲ್ಲಿ ದುಗ್ಗನ ಮಕ್ಕಳನ್ನು ಸೇರಿಸಿರುವುದಿಲ್ಲ. ದುಗ್ಗರವರು ವಿಲ್ಲುನಾಮೆ ಬರೆದಿರುವ ಕಾರಣ ಅವರ ಮಕ್ಕಳನ್ನು ಸೇರಿಸಿರುವುದಿಲ್ಲ. ನಿಪಿ 22 ದುಗ್ಗರವರು ಬರೆದಿರುವ ವಿಲ್ಲುನಾಮೆ. ನಿಪಿ 22 ಸರಿಯಾಗಿದೆ. ನಿಪಿ 22 ರ ಪ್ರಕಾರ ಆಸ್ತಿ ಬರಬೇಕು.

4. ಗೋವಿಂದು ಹೆಂಗಸು ನಾನು ಹುಟ್ಟುವ ಮೊದಲೇ ತೀರಿ ಹೋಗಿರುತ್ತಾರೆ. 1992-1993 ನೇ ಇಸವಿಯಲ್ಲಿ ದುಗ್ಗರವರು ತೀರಿ ಹೋಗಿರುತ್ತಾರೆ. ಸುಬ್ಬಿ ನಾನು ಹುಟ್ಟುವ ಮೊದಲೇ ತೀರಿ ಹೋಗಿರುತ್ತಾರೆ. ಸಾಧಾರಣ 2000 ನೇ ಇಸವಿಯಲ್ಲಿ ಗಣಪ ತೀರಿ ಹೋಗಿರುತ್ತಾರೆ. 2006-2007 ನೇ ಇಸವಿಯಲ್ಲಿ ಸುಕ್ರು ತೀರಿ ಹೋಗಿರುತ್ತಾರೆ. ಚಂದು 1992-1993 ನೇ ಇಸವಿಯಲ್ಲಿ ತೀರಿ ಹೋಗಿರುತ್ತಾರೆ.

5. ದಾವಾ ಆಸ್ತಿ ಐಟಂ ನಂಬ್ರ 1 ನಿಪಿ 16 ರ ಪ್ರಕಾರ ಬಂದಿರುತ್ತದೆ. ಮಂಜುನಾಥ ಕಾರಂತ ಮತ್ತು ಅವರ ಕುಟುಂಬದವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ 16 ಆಗುವ ಮೊದಲು ಸದರಿ ಆಸ್ತಿ ನಮ್ಮ ಕುಟುಂಬದವರ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ

ಆಸ್ತಿಯ ಐಟಂ ನಂಬ್ರ 2 ಮತ್ತು 3 ನ್ನು ನಿಪಿ 17 ರ ಪ್ರಕಾರ ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯನ್ನು ಕೂಡಾ ಮಂಜುನಾಥ ಕಾರಂತರವರಿಂದ ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿಯ ಐಟಂ ನಂ ನಂಬ್ರ 1 ರಿಂದ 3 ಆಸ್ತಿಯನ್ನು ಸುಬ್ಬಿ ಹೆಂಗಸುರವರು ಖರೀದಿ ಮಾಡಿರುತ್ತಾರೆ. ನಿಪಿ 16 ಮತ್ತು 17 ರಲ್ಲಿ ಕುಟುಂಬದ ಪರವಾಗಿ ಖರೀದಿ ಮಾಡಿರುತ್ತಾರೆ ಎಂದು ಇರುವುದಿಲ್ಲ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

6. ದಾವಾ ಐಟಂ ನಂಬ್ರ 4 ಮತ್ತು 5 ನ್ನು ಸುಕ್ರು ಖರೀದಿ ಮಾಡಿರುವುದು ಎಂದು ಹೇಳಿರುತ್ತೇನೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸುಕ್ರುರವರು ಕೂಡಾ ವಿಲ್ಲುನಾಮೆ ಬರೆದಿರುತ್ತಾರೆ. ಸುಕ್ರು ಮತ್ತು ಗಣಪರವರ ವಿಲ್ಲುನಾಮೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಾವಾ ಆಸ್ತಿಯ ಐಟಂ ನಂಬ್ರ 1 ರಿಂದ 3 ಸುಬ್ಬಿಯವರ ಸ್ವಂತ ಆಸ್ತಿ ಹಾಗು 4 ಮತ್ತು 5 ಸುಬ್ಬಿಯವರ ಸ್ವಂತ ಆಸ್ತಿ, ಕುಟುಂಬದ ಆಸ್ತಿ ಅಲ್ಲ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ದಾವೆಯಲ್ಲಿ ಅಳಿಯ ಸಂತಾನ ಕಟ್ಟಿನ ಪ್ರಕಾರ ದಾವಾ ಆಸ್ತಿ ಪಾಲಾಗಬೇಕು ಎಂದು ಕೇಳುತ್ತಿದ್ದೇನೆ.

7. 11 ನೇ ಪ್ರತಿವಾದಿ ಸಲ್ಲಿಸಿರುವ ಉತ್ತರವನ್ನು ನಾನು ನೋಡಿರುವುದಿಲ್ಲ. 11 ನೇ ಪ್ರತಿವಾದಿ ದಾವೆಯಲ್ಲಿ ಎಷ್ಟು ಪಾಲು ಬರಬೇಕು ಎಂದು ಕೇಳಿದ್ದಾರೆ ಎಂದು ಗೊತ್ತಿಲ್ಲ.

**ಮುಂದುವರಿದ ವಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**